# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 395 |
| ಮಾನ್ಯ ಸದಸ್ಯರ ಹೆಸರು | ಡಾ: ಧನಂಜಯ ಸರ್ಜಿ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 13.08.2025 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸರ್ಕಾರ ಜಾರಿಗೆ ತಂದಿರುವ ಭೂ ಗ್ಯಾರಂಟಿ ಯೋಜನೆಗಳಾವುವು; ಯೋಜನೆಯ ಉದ್ದೇಶವೇನು; (ವಿವರ ನೀಡುವುದು) | ಸರ್ಕಾರದಿಂದ ಜಾರಿಗೆ ತಂದಿರುವ ಭೂ ಗ್ಯಾರಂಟಿ ಯೋಜನೆಗಳ ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ. |
| ಆ) | ರಾಜ್ಯದಲ್ಲಿ ಒಟ್ಟು ಎಷ್ಟು ಕಂದಾಯ ಗ್ರಾಮಗಳಿವೆ: ಈ ಕಂದಾಯ ಗ್ರಾಮಗಳಲ್ಲಿರುವ ಜನಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | ರಾಜ್ಯದಲ್ಲಿರುವ ಕಂದಾಯ ಗ್ರಾಮಗಳ ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-2 ರಲ್ಲಿ ಒದಗಿಸಲಾಗಿದೆ. |
| ಇ) | ಕಂದಾಯ ಗ್ರಾಮಗಳಲ್ಲಿ ವಾಸ ಮಾಡುವವರಿಗೆ ಹಕ್ಕುಪತ್ರ ವಿತರಿಸುವ ಪ್ರಕ್ರಿಯೆ ಯಾವ ಹಂತದಲ್ಲಿದೆ: ಈವರೆಗೆ ಎಷ್ಟು ಕಂದಾಯ ಗ್ರಾಮಗಳಲ್ಲಿ ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ: ಎಷ್ಟು ಜನರಿಗೆ ಹಕ್ಕು ಪತ್ರ ನೀಡಲಾಗಿದೆ; (ಜಿಲ್ಲಾವಾರು ಮಾಹಿತಿ ನೀಡುವುದು) | ಕಂದಾಯ ಗ್ರಾಮಗಳಲ್ಲಿ ವಾಸ ಮಾಡುವವರಿಗೆ ಹಕ್ಕುಪತ್ರ ವಿತರಿಸುವ ಪ್ರಕ್ರಿಯೆಯು ನಿಯಮಾನುಸಾರ ಚಾಲ್ತಿಯಲ್ಲಿದ್ದು, ಈವರೆಗೆ ಒಟ್ಟು 4472 ಗುರುತಿಸಿರುವ ಅರ್ಹ ದಾಖಲೆರಹಿತ ಜನವಸತಿಗಳಲ್ಲಿ 2792 ಗಳನ್ನು ಹೊಸದಾಗಿ ಕಂದಾಯ ಗ್ರಾಮಗಳನ್ನಾಗಿ/ ಉಪಗ್ರಾಮಗಳನ್ನಾಗಿ ರಚಿಸಿ ಅಂತಿಮ ಅಧಿಸೂಚನೆಗಳನ್ನು ಹೊರಡಿಸಲಾಗಿರುತ್ತದೆ ಮತ್ತು ಒಟ್ಟು 2,08,382 ಅರ್ಹ ಫಲಾನುಭವಿಗಳಿಗೆ ಹಕ್ಕು-ಪತ್ರಗಳನ್ನು ವಿತರಿಸಲಾಗಿದೆ (ಜಿಲ್ಲಾವಾರು ಮಾಹಿತಿಯು ಅನುಬಂಧ–03 ರಲ್ಲಿ ನೀಡಿದೆ). |
| ಈ) | ರಾಜ್ಯದ ಎಲ್ಲಾ ಕಂದಾಯ ಗ್ರಾಮಗಳಿಗೂ ಅಂತಿಮ ಅಧಿಸೂಚನೆ ಹೊರಡಿಸಿ, ಹಕ್ಕುಪತ್ರ ವಿತರಿಸುವ ಕಾರ್ಯ ಯಾವಾಗ ಪೂರ್ಣಗೊಳ್ಳಲಿದೆ: ಈ ಕಾರ್ಯ ಪೂರ್ಣಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು) | ರಾಜ್ಯದ ಎಲ್ಲಾ ಅರ್ಹ ದಾಖಲೆರಹಿತ ಜನವಸತಿ ಪ್ರದೇಶಗಳನ್ನು ನಿಯಮಾನುಸಾರ ಶೀಘ್ರವಾಗಿ ಹೊಸ ಕಂದಾಯ ಗ್ರಾಮಗಳನ್ನಾಗಿ / ಉಪಗ್ರಾಮಗಳನ್ನಾಗಿ ಅಂತಿಮ ಅಧಿಸೂಚನೆ ಹೊರಡಿಸಿ, ಹಕ್ಕುಪತ್ರಗಳನ್ನು ವಿತರಿಸಲಾಗುವುದು ಹಾಗೆಯೇ ರಾಜ್ಯದ ಎಲ್ಲಾ ಅರ್ಹ ದಾಖಲೆರಹಿತ ಜನವಸತಿ ಪ್ರದೇಶಗಳನ್ನು ಹೊಸದಾಗಿ ಕಂದಾಯ ಗ್ರಾಮಗಳನ್ನಾಗಿ / ಉಪಗ್ರಾಮಗಳನ್ನಾಗಿ ನಿಯಮಾನುಸಾರ ಶೀಘ್ರವಾಗಿ ರಚಿಸುವ ಕುರಿತಂತೆ ಮೇಲಿಂದ ಮೇಲೆ ಕಂದಾಯ ಅಧಿಕಾರಿಗಳ ಸಭೆಗಳನ್ನು ಜರುಗಿಸಿ ನಿರ್ದೇಶನಗಳನ್ನು ನೀಡಲಾಗುತ್ತಿದೆ ಮತ್ತು ಇದೇ ಕಾರ್ಯಕ್ಕಾಗಿ ಒಂದು ಕೋಶ (ಕಂದಾಯ ಗ್ರಾಮಗಳ ರಚನಾ ಕೋಶ) ಇದ್ದು, ಸದರಿ ಕೋಶದ ಅಧಿಕಾರಿಗಳಿಂದ ಹಾಗೂ ಮೇಲಾಧಿಕಾರಿಗಳಿಂದ ವಿಷಯವಾಗಿ ಮೇಲುಸ್ತುವಾರಿ ಮಾಡುತ್ತಿದ್ದು ಶೀಘ್ರವಾಗಿ ಹೊಸ ಕಂದಾಯ ಗ್ರಾಮಗಳನ್ನಾಗಿ ರಚನೆ ಮಾಡಿ ಅರ್ಹ ಫಲಾನುಭವಿಗಳಿಗೆ ಹಕ್ಕುಪತ್ರಗಳನ್ನು ವಿತರಿಸಲಾಗುವುದು. |

ಕಂಇ 189 ಎಂಆರ್ ಆರ್ 2025

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು

ಶಾ.ರ. ಪ್ರ.ಸಂ: 395 ಕ್ಕೆ

## ಅನುಬಂಧ-1

## ಭೂ-ಗ್ಯಾರಂಟಿ ಯೋಜನೆಗಳು

- **ಭೂ-ಸುರಕ್ಷಾ ಯೋಜನೆ (ಕಂದಾಯ ದಾಖಲೆಗಳ ಗಣಕೀಕರಣ)**: ಸದರಿ ಯೋಜನೆಯಡಿಯಲ್ಲಿ ರಾಜ್ಯದ ಕಂದಾಯ ಕಛೇರಿಯಲ್ಲಿನ ಎಲ್ಲಾ ದಾಖಲೆಗಳನ್ನು ಡಿಜಿಟಲೀಕರಣ ಮಾಡಲು ಹಾಗೂ ಡಿಜಿಟಲ್ ದಾಖಲೆಗಳನ್ನು ಸಾರ್ವಜನಿಕರಿಗೆ ವಿತರಿಸಲು ಕ್ರಮವಹಿಸಲಾಗುತ್ತಿದೆ.

- **ಆರ್.ಸಿ.ಸಿ.ಎಂ.ಎಸ್ 2.0 (Revenue Court Case Monitoring System 2.0)**: ಕಂದಾಯ ನ್ಯಾಯಾಲಯಗಳಾದ ತಹಸೀಲ್ದಾರ್ ನ್ಯಾಯಾಲಯ, ಉಪವಿಭಾಗಾಧಿಕಾರಿಗಳ ನ್ಯಾಯಾಲಯ ಹಾಗೂ ಜಿಲ್ಲಾಧಿಕಾರಿಗಳ ನ್ಯಾಯಾಲಯದ ಪ್ರಕ್ರಿಯೆಯನ್ನು RCCMS ತಂತ್ರಾಂಶದ ಮುಖಾಂತರ ಆನ್-ಲೈನ್ ನಲ್ಲಿಯೇ ನಿರ್ವಹಿಸಲಾಗುತ್ತಿದ್ದು, ಹಾಗೂ ಎಲ್ಲಾ ಆದೇಶಗಳನ್ನು ಡಿಜಿಟಲ್ ಸಹಿಯೊಂದಿಗೆ ನೀಡಲಾಗುತ್ತಿದೆ.

- **ಲ್ಯಾಂಡ್ ಬೀಟ್ ತಂತ್ರಾಂಶ**: ರಾಜ್ಯದಲ್ಲಿನ ಸರ್ಕಾರಿ ಜಮೀನುಗಳು ಅನಧಿಕೃತ ಒತ್ತುವರಿಯಾಗುವುದನ್ನು ತಪ್ಪಿಸಲು Land Beat ಮೊಬೈಲ್ ಆಪ್ ಅಭಿವೃದ್ಧಿಪಡಿಸಿದ್ದು ಕಾರ್ಯನಿರ್ವಹಣೆಯಲ್ಲಿರುತ್ತದೆ.

- **ಆಧಾರ್ ಸೀಡಿಂಗ್ (ನನ್ನ ಆಸ್ತಿ)**: ರೈತರ ಜಮೀನಿಗೆ ಸಂಭಂಧಿಸಿದಂತೆ ಯಾವುದೇ ಕಾನೂನುಬಾಹಿರ ವಹಿವಾಟುಗಲಾಗದಂತೆ ತಡೆಯುವ ಹಾಗೂ ಸಂಬಂಧಿಸಿದ ರೈತರಿಗೆ ನೇರವಾಗಿ ಸರ್ಕಾರಿ ಸೌಲಭ್ಯವನ್ನು ವಿತರಿಸಲು ಸುಲಭವಾಗುವ ನಿಟ್ಟಿನಲ್ಲಿ ಪಹಣಿಯೊಂದಿಗೆ ರೈತರ ಆಧಾರ್ ಸಂಖ್ಯೆಯನ್ನು ಜೋಡಣೆ ಮಾಡಲಾಗುತ್ತಿದೆ.

- **ಆಟೋ-ಮ್ಯುಟೇಷನ್**: ನೋಟೀಸು ರಹಿತ ಮ್ಯುಟೇಶನ್ ಗಳನ್ನು Manual Thumb Impression ಬದಲಿಗೆ Server Certificate ಮೂಲಕ ಅನುಮೋದನೆಗೊಳ್ಳುವಂತೆ (Auto Approval) ಭೂಮಿ ತಂತ್ರಾಂಶದಲ್ಲಿ ಅಗತ್ಯ ಮಾರ್ಪಾಡು ಮಾಡಲಾಗಿರುತ್ತದೆ. ರಾಜ್ಯದಲ್ಲಿ ವಿಲೇವಾರಿಯಾಗುವ ಒಟ್ಟಯ ಮ್ಯುಟೇಷನ್ ಗಳಲ್ಲಿ ಶಕಡಾ ೭೦ ರಷ್ಟು ಮುಟೇಷನ್ ಗಳನ್ನು ಆಟೋ-ಮ್ಯುಟೇಷನ್ ವ್ಯಾಪ್ತಿಯಡಿ ತರಲಾಗಿದೆ.

- **1-5 & 6-10 ಡಿಜಿಟಲೀಕರಣ (ನನ್ನ ಭೂಮಿ)**: ಭೂ ಮಂಜೂರಾತಿ ಪ್ರಕರಣಗಳ ದರಖಾಸ್ತು ಪೋಡಿ ದುರಸ್ತಿ ಸಂಬಂಧ ನಮೂನೆ 1-5 & 6-10 ಪ್ರಕ್ರಿಯೆ ಸರಳೀಕರಣ ಮಾಡುವ ಕುರಿತು ಸರ್ಕಾರದ ಆದೇಶ ಸಂಖ್ಯೆ: ಕಂಇ 156 ಎಸ್ ಎಸ್ ಎಂ 2024, ದಿನಾಂಕ:25.11.2024 ರನ್ವಯ ಆದೇಶಿಸಲಾಗಿದ್ದು, ಅದರಂತೆ ಸದರಿ 1-5 & 6-10 ನಮೂನೆಗಳನ್ನು ಡಿಜಿಟಲೈಜ್ ಮಾಡಲು ತಂತ್ರಾಂಶ ಅಭಿವೃದ್ಧಿಪಡಿಸಿ ರಾಜ್ಯದೆಲ್ಲೆಡೆ ಅಳವಡಿಸಲಾಗಿರುತ್ತದೆ.

- **ಇ-ಪೌತಿ**: ಅರ್ಜಿದಾರರ ಇ-ಕೆವೈಸಿಯೊಂದಿಗೆ ತ್ವರಿತವಾಗಿ ಹಾಗೂ ಸುಲಭವಾಗಿ ಪೌತಿ ಮ್ಯಟೇಶನ್ ಮಾಡಲು ಅನುಕೂಲವಾಗುವಂತೆ ಇ-ಪೌತಿ ಮೊಬೈಲ್ ಆಪ್ ತಂತ್ರಾಂಶವನ್ನು ಅಭಿವೃದ್ಧಿಪಡಿಸಿ ರಾಜ್ಯದೆಲ್ಲೆಡೆ ಅಳವಡಿಸಲಾಗಿರುತ್ತದೆ.

- **ಬಗ್ಗೈರ್‌ಹುಕುಂ ತಂತ್ರಾಂಶ**: ಅನಧಿಕೃತ ಸಾಗುವಳಿ ಸಕ್ರಮೀಕರಣ ಸಂಬಂಧ ನಮೂನೆ-50, 53 ಮತ್ತು 57 ರಡಿ ಸ್ವೀಕರಿಸಿರುವ ಅರ್ಜಿಗಳನ್ನು ತ್ವರಿತವಾಗಿ ಇತ್ಯರ್ಥಪಡಿಸುವ ಸಂಬಂಧ ಎಲ್ಲಾ ಪ್ರಕ್ರಿಯೆಗಳನ್ನು ಬಗ್ಗೈರ್ ಹುಕುಂ ತಂತ್ರಾಂಶದಲ್ಲಿಯೇ ನಿರ್ವಹಿಸಲು ಬಗ್ಗೈರ್ ಹುಕುಂ ((END to END) ತಂತ್ರಾಂಶವನ್ನು ಅಭಿವೃದ್ಧಿಪಡಿಸಲಾಗಿದೆ.

- **ಇ-ಖಾವಡಿ**: ಮ್ಯುಟೇಶನ್ ವಹಿವಾಟುಗಳಲ್ಲಿ ಪಾರದರ್ಶಕತೆ ಹೆಚ್ಚಿಸಲು ಮತ್ತು ನಿರ್ದಿಷ್ಟ ಭೂಮಿಯ ಮೇಲಿನ ವಹಿವಾಟುಗಳ ಬಗ್ಗೆ ರೈತರಿಗೆ ಮಾಹಿತಿ ನೀಡುವ ಉದ್ದೇಶದಿಂದ ಇ-ಖಾವಡಿ ಪೋರ್ಟಲ್ ಆರಂಭಿಸಲಾಗಿದ್ದು, ಇದೊಂದು ಸಾರ್ವಜನಿಕ ಪೋರ್ಟಲ್ ಆಗಿರುತ್ತದೆ. ಇಲ್ಲಿ ಗ್ರಾಮವಾರು ನಮೂನೆ 12 ಮತ್ತು 21 ತಿಳುವಳಿಕೆ ನೋಟಿಸ್ ಗಳು, RCCMS ಪ್ರಕರಣಗಳ ಮಾಹಿತಿ,

ಭೂಪರಿವರ್ತನೆಯ ಕೋರಿಕೆಯ ಸ್ಥಿತಿ ಹಾಗೂ ಸರ್ಕಾರಿ ಜಮೀನಗಳ ಮಾಹಿತಿಯನ್ನು ವೀಕ್ಷಿಸಬಹುದು. (Portal link: https://rdservices.karnataka.gov.in/echawadi/ )

- **ಡಿಜಿಟಲ್ ಡ್ಯಾಶ್ ಬೋರ್ಡ್:** ಸಾರ್ವಜನಿಕರಿಗೆ ಜಮೀನಿನ ಸಂಬಂಧಿತ ಎಲ್ಲಾ ಅಗತ್ಯ ಮಾಹಿತಿ ಒದಗಿಸುವ ನಿಟ್ಟಿನಲ್ಲಿ ಸಾರ್ವಜನಿಕ ಪೋರ್ಟಲ್ ಅಭಿವೃದ್ಧಿಪಡಿಸಲಾಗಿದ್ದು, ಸದರಿ ಪೋರ್ಟಲ್ ನಲ್ಲಿ ರಾಜ್ಯದಲ್ಲಿನ ಪಹಣಿ ವಿವರ, ಮಾಲೀಕರ ವಿವರ, ಸರ್ಕಾರಿ ಜಮೀನಿನ ವಿವರ, ಮ್ಯುಟೇಶನ್ ವಿವರ ಒಳಗೊಂಡಂತೆ ಭೂಮಿ ಸಂಬಂಧಿತ ಎಲ್ಲಾ ಮಾಹಿತಿಯು ಗ್ರಾಮವಾರು ಲಭ್ಯವಿರುತ್ತದೆ. (Portal link : https://rdreports.karnataka.gov.in/ )

- **ಪರಿಹಾರ 2.0**: ನೈಸರ್ಗಿಕ ವಿಕೋಪಗಳಿಂದ ತತ್ತರಿಸಿದ ರೈತರಿಗೆ ಕ್ಷಿಪ್ರ, ಪಾರದರ್ಶಕ ಮತ್ತು ನಿಖರವಾದ ಪರಿಹಾರವನ್ನು ನೀಡುವ ನಿಟ್ಟಿನಲ್ಲಿ ಪರಿಹಾರ ತಂತ್ರಾಂಶವನ್ನು ಉನ್ನತೀಕರಿಸಲಾಗಿದ್ದು, ಪರಿಹಾರ 2.0 ತಂತ್ರಾಂಶದಲ್ಲಿ ಉಪಗ್ರಹ ಆಧಾರಿತ ಬೆಳೆ ಹಾನಿ ದತ್ತಾಂಶ, ಆಧಾರ್ ಜೋಡಿತ ಭೂ ದಾಖಲೆಗಳು (BHOOMI) ಮತ್ತು ಬೆಳೆ ಮಾಹಿತಿಯನ್ನು (Crop Survey) ಸಂಯೋಜಿಸಿ, ನಿಜವಾದ ಸಂತ್ರಸ್ತರನ್ನು ಗುರುತಿಸಿ ಯಾವುದೇ ಮಧ್ಯವರ್ತಿಗಳಿಲ್ಲದೆ ನೇರವಾಗಿ ಅವರ ಬ್ಯಾಂಕ್ ಖಾತೆಗಳಿಗೆ ಪರಿಹಾರ ಜಮಾವಣೆ ಮಾಡಲಾಗುತ್ತಿದೆ.

- **ಕಂದಾಯ ಗ್ರಾಮ:** ದಾಖಲೆರಹಿತ ಜನವಸತಿಗಳಾದ ತಾಂಡ, ಹಟ್ಟಿ, ಹಾಡಿ, ದೊಡ್ಡಿ, ಪಾಳ್ಯ, ಮಜರೆ, ಕ್ಯಾಂಪ್, ಕಾಲೋನಿ ಇತ್ಯಾದಿಗಳಲ್ಲಿ ವಾಸಿಸುತ್ತಿರುವ ನಿವಾಸಿಗಳು ಸರ್ಕಾರಿ ಸೌಲಭ್ಯ ಪಡೆಯಲು ಅನುವಾಗುವಂತೆ ಇಂತಹ ಗ್ರಾಮಗಳನ್ನು ಗುರುತಿಸಿ, ಕಂದಾಯ ಗ್ರಾಮಗಳಾಗಿ ಘೋಷಿಸಲಾಗುತ್ತಿದೆ. ದೇಶದಲ್ಲಿಯೇ ಮೊದಲಬಾರಿಗೆ ಕಂದಾಯ, ಗ್ರಾಮೀಣಾಭಿವೃದ್ಧಿ ಹಾಗೂ ಮುದ್ರಾಂಕ ಇಲಾಖೆಯ ತಂತ್ರಾಂಶವನ್ನು ಸಂಯೋಜಿಸಿ ಹಕ್ಕುಪತ್ರವನ್ನು ನೋಂದಾಯಿಸಿ ಈ-ಸ್ವತ್ತು (ಇ-ಖಾತಾ) ದಾಖಲಾತಿಯೊಂದಿಗೆ ಫಲಾನುಭವಿಗೆ ನೀಡಲಾಗುತ್ತಿದೆ.

- **IMP Automation:** ಮ್ಯುಟೇಶನ್ ಮತ್ತು ಪೋಡಿಯನ್ನು ತ್ವರಿತವಾಗಿ ಮಾಡಲು ಅವಕಾಶವಾಗುವಂತೆ ಸಂಯೋಜಿತ ಮ್ಯುಟೇಶನ್ ಪೋಡಿ (IMP) ಪ್ರಕ್ರಿಯೆಯನ್ನು ಆಟೋಮೇಶನ್ ಮಾಡಲಾಗಿರುತ್ತದೆ. ಸದರಿ ಹೊಸ ಸಂಯೋಜಿತ ಮ್ಯುಟೇಶನ್ ಪೋಡಿ ಆಟೋಮೇಶನ್ ಪ್ರಕ್ರಿಯೆಯಲ್ಲಿ ಭೂಮಿ ತಂತ್ರಾಂಶಕ್ಕೆ ಸ್ವೀಕೃತವಾಗುವ ವಹಿವಾಟುಗಳು ರಾಜಸ್ವ ನಿರೀಕ್ಷಕರ ಲಾಗಿನ್ ನ ಸರಳ ಮ್ಯುಟೇಶನ್ ವಿಧಾನದಲ್ಲಿ ಅನುಮೋದಿಸಲ್ಪಟ್ಟು, ಪಹಣಿಯಲ್ಲಿ ಹೊಸ ಖಾತೆದಾರರ ಹೆಸರು ದಾಖಲಾಗುತ್ತದೆ ಹಾಗೂ ತದನಂತರ ಫಾರ್ಮ್ 10 ಸೃಜಿಸಲು 11ಇ ನಕ್ಷೆಯನ್ನು ಮೋಜಣಿಗೆ ಕಳುಹಿಸಲಾಗುವುದು ಹಾಗೂ ಆಕಾರ್ ಬಂದ್ ಸ್ವಯಂಚಾಲಿತವಾಗಿ ಅಪ್ಡೇಟ್ ಮಾಡಲಾಗುವುದು. ಅಂತಿಮವಾಗಿ ಸಂಬಂಧಿಸಿದ ಭೂದಾಖಲೆಗಳ ಸಹಾಯಕ ನಿರ್ದೇಶಕರ ಲಾಗಿನ್ ನಲ್ಲಿ ಫಾರ್ಮ್ 10 ಅನುಮೋದನೆಯ ನಂತರ ಭೂಮಿಗೆ ಕಳುಹಿಸಿ, ನೇರವಾಗಿ ಪೋಡಿ ಮ್ಯುಟೇಶನ್ ಮೂಲಕ ಪಹಣಿ ಸೃಜಿಸಲಾಗುತ್ತದೆ.

ಚುಕ್ಕೆ ರಹಿತ ಪ್ರಶ್ನೆ ಸಂ: 395 ಕ್ಕೆ

## ಅನುಬಂಧ-2

ರಾಜ್ಯದಲ್ಲಿರುವ ಕಂದಾಯ ಗ್ರಾಮಗಳು ಹಾಗೂ ಜನಸಂಖ್ಯೆ ವಿವರಗಳು (ಜಿಲ್ಲಾವಾರು ಮಾಹಿತಿ)

| ಕ್ರ.ಸಂ | ಜಿಲ್ಲೆ | ಒಟ್ಟು ಕಂದಾಯ ಗ್ರಾಮಗಳ ಸಂಖ್ಯೆ | ಜನಸಂಖ್ಯೆ |
|---|---|---|---|
| 1. ಬೆಂಗಳೂರು ವಿಭಾಗ | | | |
| 1 | ಬೆಂಗಳೂರು ನಗರ | 852 | 15902337 |
| 2 | ಬೆಂಗಳೂರು ಗ್ರಾಮಾಂತರ | 936 | 990923 |
| 3 | ಚಿಕ್ಕಬಳ್ಳಾಪುರ | 1376 | 1255104 |
| 4 | ತುಮಕೂರು | 2544 | 2003404 |
| 5 | ಕೋಲಾರ | 1797 | 1772868 |
| 6 | ರಾಮನಗರ | 868 | 1172616 |
| 7 | ಚಿತ್ರದುರ್ಗ | 296 | 123928 |
| 8 | ದಾವಣಗೆರೆ | 910 | 1316487 |
| 9 | ಶಿವಮೊಗ್ಗ | 1619 | 1752753 |
| 2. ಮೈಸೂರು ವಿಭಾಗ | | | |
| 1. | ಚಾಮರಾಜನಗರ | 424 | 1020962 |
| 2. | ಚಿಕ್ಕಮಗಳೂರು | 1132 | 1114059 |
| 3. | ದಕ್ಷಿಣ ಕನ್ನಡ | 422 | 2391375 |
| 4. | ಹಾಸನ | 2581 | 1856012 |
| 5. | ಕೊಡಗು | 534 | 548561 |
| 6. | ಮಂಡ್ಯ | 1346 | 1805769 |
| 7 | ಮೈಸೂರು | 1336 | 3001127 |
| 8 | ಉಡುಪಿ | 267 | 1177361 |
| 3. ಕಲಬುರಗಿ ವಿಭಾಗ | | | |
| 1. | ಕಲಬುರಗಿ | 356 | 309860 |
| 2. | ಬಳ್ಳಾರಿ | 370 | 793386 |
| 3. | ಬೀದರ್ | 231 | 51660 |
| 4. | ವಿಜಯನಗರ | 356 | 278520 |
| 5. | ಕೊಪ್ಪಳ | 595 | 1389920 |
| 6. | ರಾಯಚೂರು | 121 | 26836 |
| 7. | ಯಾದಗಿರಿ | 94 | 49792 |
| 4. ಬೆಳಗಾವಿ ವಿಭಾಗ | | | |
| 1. | ಬೆಳಗಾವಿ | 1362 | 4779661 |
| 2. | ಬಿಜಾಪುರ /ವಿಜಯಪುರ | 287 | 93100 |
| 3. | ಬಾಗಲಕೋಟೆ | 36 | 37852 |
| 4. | ಧಾರವಾಡ | 413 | 1847023 |
| 5. | ಗದಗ | 353 | 1199320 |
| 6. | ಹಾವೇರಿ | 696 | 1597668 |
| 7. | ಉತ್ತರ ಕನ್ನಡ ಜಿಲ್ಲೆ | 16 | 1567 |

ಚು.ರ.ಪ್ರ.ನಂ: 398 ಕ್ಕೆ

<u>ಅನುಬಂಧ-03</u>

| ಕ್ರ.ಸಂ | ಜಿಲ್ಲೆ | ಹಕ್ಕುಪತ್ರ ವಿತರಿಸಿದ ವಿವರ |
|---|---|---|
| 1 | 2 | 3 |
| 1 | ಬೆಂಗಳೂರು ನಗರ | 674 |
| 2 | ಉತ್ತರ ಕನ್ನಡ | 1061 |
| 3 | ವಿಜಯನಗರ | 17933 |
| 4 | ಬಾಗಲಕೋಟೆ | 5439 |
| 5 | ರಾಯಚೂರು | 8471 |
| 6 | ಹಾಸನ | 3274 |
| 7 | ಮೈಸೂರು | 5576 |
| 8 | ವಿಜಯಪುರ | 20143 |
| 9 | ಕಲಬುರ್ಗಿ | 25264 |
| 10 | ಶಿವಮೊಗ್ಗ | 1378 |
| 11 | ಚಾಮರಾಜನಗರ | 749 |
| 12 | ಬಳ್ಳಾರಿ | 10357 |
| 13 | ಬೆಳಗಾವಿ | 14047 |
| 14 | ಚಿತ್ರದುರ್ಗ | 16429 |
| 15 | ಮಂಡ್ಯ | 6619 |
| 16 | ಯಾದಗಿರಿ | 12165 |
| 17 | ಚಿಕ್ಕಬಳ್ಳಾಪುರ | 2347 |
| 18 | ಕೋಲಾರ | 2864 |
| 19 | ತುಮಕೂರು | 13258 |
| 20 | ರಾಮನಗರ | 2358 |
| 21 | ಚಿಕ್ಕಮಗಳೂರು | 4226 |
| 22 | ಬೀದರ್ | 8014 |
| 23 | ದಾವಣಗೆರೆ | 5090 |
| 24 | ಗದಗ | 3569 |
| 25 | ಕೊಪ್ಪಳ | 4385 |
| 26 | ಧಾರವಾಡ | 2007 |
| 27 | ಹಾವೇರಿ | 3139 |

| | | |
|---|---|---|
| 28 | ಬೆಂಗಳೂರು ಗ್ರಾಮಾಂತರ | 7546 |
| 29 | ದಕ್ಷಿಣ ಕನ್ನಡ | 0 |
| 30 | ಕೊಡಗು | 0 |
| 31 | ಉಡುಪಿ | 0 |
| | **ಒಟ್ಟು** | **208382** |